# ವಿಶ್ವಕುಟುಂಬಿ ಶ್ರೀಮಾತೆ ಶಾರದಾದೇವಿ

ವಿಜಯಕುಮಾರ್

*ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಅತ್ಯಂತ ಪ್ರಸ್ತುತವಾದ ವಿಶ್ವಕುಟುಂಬ ಕಲ್ಪನೆಯ ಚಿತ್ರವನ್ನು ಶ್ರೀಮಾತೆ ಶಾರದಾದೇವಿಯವರ ಜೀವನದ ಹಿನ್ನೆಲೆಯಲ್ಲಿ ನೀಡಿರುವವರು ಶ್ರೀವಿಜಯಕುಮಾರ್ ಅವರು. ಶ್ರೀಯುತರು 'ವಿವೇಕಪ್ರಭ' ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವರು.*

## ಜಾಗತೀಕರಣವಲ್ಲ, ಜಾಗೃತೀಕರಣ

**ಆ**ಧುನಿಕತೆಯ ಒಂದು ದೊಡ್ಡ ವಿಡಂಬನೆಯೆಂದರೆ ಜಾಗತೀಕರಣದ ಮಾತಿನೊಂದಿಗೆ, ಈ ಬುವಿಯೆಲ್ಲ ಒಂದು 'ವಿಶ್ವಗ್ರಾಮ' ಎಂಬ ಘೋಷಣೆಯ ಜೊತೆಜೊತೆಯಲ್ಲೇ ಜನರ ಮನಸ್ಸುಗಳನ್ನು ಒಡೆಯುವ, ಅವರ ಭಾವನೆಗಳನ್ನು ಛಿದ್ರಗೊಳಿಸುವ, ಮನೆಗಳನ್ನು ಹುರಿದು ಮುಕ್ಕುವ ವಿಚ್ಛಿದ್ರಾತ್ಮಕ ಶಕ್ತಿಗಳು ನಿರಂತರವಾಗಿ ಕೆಲಸದಲ್ಲಿ ತೊಡಗಿರುವುದು. ತಾಂತ್ರಿಕ ಮುನ್ನಡೆಯಿಂದ ಅತ್ಯಾಧುನಿಕ ಸಂಪರ್ಕಸಾಧನಗಳು ಬಾಹ್ಯ ಜಗತ್ತಿನ ದೂರವನ್ನು ಕಡಮೆಗೊಳಿಸುತ್ತಲೇ, ವ್ಯಕ್ತಿ ತನ್ನಿಂದ ತಾನೇ ದೂರವಾಗುವಂತೆ, ತನ್ನ ನೆಲೆಯಿಂದ ತಾನೇ ಕಿತ್ತೆಸೆಯಲ್ಪಟ್ಟವನಂತೆ, ಅನಾಥಪ್ರಜ್ಞೆಯನ್ನು ತೀಕ್ಷ್ಣಗೊಳಿಸಿರುವುದು ಈ ವಿಡಂಬನೆಗೆ ಭೂತಗನ್ನಡಿ ಹಿಡಿದಂತಿದೆ. ಇಂತಹ ಅನಾಥ ಪ್ರಜ್ಞೆಯಿಂದ ಬಳಲುತ್ತಿರುವರಿಗೆ ವಿಶ್ವದೊಂದಿಗಿನ ಭಾವನಾತ್ಮಕ ಸಂಬಂಧದ ಮಾತಿರಲಿ, ತಮ್ಮ ನೆರೆಹೊರೆಯವರೇ ತಮ್ಮ ದೇಶಬಾಂಧವರೇ, ನಾಡಿನವರೇ, ಊರಿನವರೇ ಅಪರಿಚಿತರಂತೆ ಕಾಣುತ್ತಾರೆ. ಯಾರಾದರೂ ಮನೆಯ ಕದ ತಟ್ಟಿದರೆ, ಮೊದಲು ಕಿಟಕಿಯಿಂದಲೋ ಕೀಹೋಲ್‌ನಿಂದಲೋ ನೋಡಿ ಅಪಾಯವಿಲ್ಲದಿರುವುದನ್ನು ಖಚಿತ ಮಾಡಿಕೊಂಡನಂತರವೇ ಬಾಗಿಲು ತೆರೆಯುವ ಸಂದೇಹ ಅಥವಾ ಭಯದ ವಾತಾವರಣವನ್ನು ಸೃಷ್ಟಿಸಿಕೊಂಡಿದ್ದಾರೆ. ಇಷ್ಟಾಗಿಯೂ ವಿಶ್ವವನ್ನೆಲ್ಲ ಒಂದು ಸಣ್ಣ ಗ್ರಾಮವಾಗಿ ಮಾಡಿಕೊಂಡು, ಯಾವ ಭಯವೂ ಇಲ್ಲದೆ ನಿರ್ಭೀತಿಯಿಂದ ಒಂದೇ ಕುಟುಂಬದವರಂತೆ ಬದುಕುವ ಕನಸನ್ನು ಕಾಣುತ್ತಿರುವುದು ಮನುಷ್ಯನಲ್ಲಿನ ಅದಮ್ಯವಾದ ಆಶಾವಾದದ ದ್ಯೋತಕವಾಗಿದೆ. ಈ ಆಶಾವಾದ ಅರ್ಥಪೂರ್ಣವಾಗಬೇಕಾದರೆ, ಈ ವಿಶ್ವಕುಟುಂಬದ ಆದರ್ಶವನ್ನು ಭಾರತದ ಪ್ರಾಚೀನ ಆರ್ಷೇಯ ಪರಂಪರೆ ತನ್ನದೇ ಆದ ರೀತಿಯಲ್ಲಿ ವಸುಧೈವ ಕುಟುಂಬಕಮ್ ಎಂದು ಅರ್ಥೈಸಿ ಅದನ್ನು ಹೇಗೆ ತನ್ನ ಅನುಭೂತಿಯನ್ನಾಗಿಸಿಕೊಂಡಿತ್ತು ಎಂಬುದರ ಕಡೆ ನಾವು ಎಚ್ಚೆತ್ತುಕೊಳ್ಳಬೇಕಾಗಿದೆ.

ಈ ಹಿನ್ನೆಲೆಯಲ್ಲಿ, ಯಾರ ಜೀವನದ ಪದಕೋಶದಲ್ಲಿ 'ಪರರು' ಎಂಬ ಪದವೇ ಇರಲಿಲ್ಲವೊ, ಯಾರ ಪ್ರಜ್ಞೆಯು ತನ್ನ ಜನ, ಗ್ರಾಮ, ನಾಡು, ದೇಶಗಳೆಂಬ ಸೀಮಿತವಾದ ಗಡಿಯನ್ನು ದಾಟಿ ಇಡೀ ವಿಶ್ವವನ್ನೇ ತನ್ನ ಭಾಗವಾಗಿರಿಸಿಕೊಂಡಿತ್ತೊ, ಯಾರ ಬದುಕು ಆ ವಿಶ್ವಪ್ರಜ್ಞೆಯ ಒಂದು ಅಭಿವ್ಯಕ್ತಿಯಂತಿತ್ತೊ ಅಂತಹ ವಿಶ್ವ ಪ್ರಜ್ಞೆಯ ಅಭಿವ್ಯಕ್ತಿಯಂತಿದ್ದ ಶ್ರೀಮಾತೆಯವರ ಬದುಕಿಗೆ ನಾವು ಎಚ್ಚೆತ್ತುಗೊಳ್ಳುವುದೆಂದರೆ ಆರ್ಷೇಯ ಪರಂಪರೆಯ ವಸುಧೈವ **ಕುಟುಂಬಕಮ್** ಎಂಬ ಆದರ್ಶಕ್ಕೆ ಎಚ್ಚೆತ್ತುಕೊಳ್ಳುವುದೇ ಆಗಿದೆ.

## ಗುಪ್ತ ಮಹಿಮೆ

ಶ್ರೀಮಾತೆಯವರಿಗೆ ತಮ್ಮ ಮಹಿಮೆಯ ಬಗ್ಗೆ ಅರಿವಿತ್ತೇ ವಿನಃ ಇತರರ ಅಲ್ಪತನದ, ಕ್ಷುದ್ರತೆಯ ಕಡೆ ಅವರು ಎಂದೂ ಕಣ್ಣೆತ್ತಿಯೂ ನೋಡಿದವರಲ್ಲ. ಆದರೆ ಮನುಷ್ಯನ ಕ್ಷುದ್ರತೆ ಆ ಕಣ್ಣುಕುಕ್ಕುವ ಮಹಿಮೆಯನ್ನು ತಾಳಲಾರದೆಂದೊ ಏನೊ, ಜನ ತಮ್ಮ ದೈವಿಕ ಕೃಪೆಯಿಂದ ದೂರವೇ ಉಳಿಯುತ್ತಾರೆಂದೋ ಏನೋ ಅವರು ಸಾಮಾನ್ಯರಲ್ಲಿ ಸಾಮಾನ್ಯರಾಗಿ ವ್ಯವಹರಿಸಿದರು. ಈ ವಿಷಯದಲ್ಲಿ ಶ್ರೀಮಾತೆಯವರ ಕರುಣೆ ಶ್ರೀರಾಮಕೃಷ್ಣರಿಗಿಂತ ಸ್ವಲ್ಪ ಅಧಿಕವೆಂದೇ ಹೇಳಬೇಕು. ಕಾರಣ ದೇವದೇವಿಯರಿಗೆ ತುಲ್ಯವಾದ ತೇಜೋರಾಶಿಯನ್ನು ಗೋಪ್ಯವಾಗಿಟ್ಟು, ಸಾಮಾನ್ಯ ಗ್ರಾಮೀಣ ಮಹಿಳೆಯಂತೆ ಕಾಣಿಸಿಕೊಂಡು ತಮ್ಮ ಸ್ನೇಹ ಮಮತೆಗಳನ್ನು ಪ್ರಕಾಶಗೊಳಿಸಿದರು. ಕೃತ್ರಿಮತೆಯಿಂದ ಕಲುಷಿತವಾಗದ ಗ್ರಾಮೀಣ ಪರಿಸರದಲ್ಲಿ ಹುಟ್ಟಿ, ಬೆಳೆದು ಸಹಜವಾಗಿ ಅರಳಿದ ವ್ಯಕ್ತಿತ್ವ ಶ್ರೀಮಾತೆಯವರದಾಗಿತ್ತು.

ಒಂದು ಸಣ್ಣ ಸಂಸಾರದ ಜವಾಬ್ದಾರಿಯನ್ನು ಹೊತ್ತು ರಕ್ತಸಂಬಂಧಿಗಳಿಗಷ್ಟೇ ತಮ್ಮ ಪ್ರೀತಿ, ಸೇವೆಗಳನ್ನು ಮುಡಿಪಾಗಿಡುವುದು ಶ್ರೀಮಾತೆಯವರ ಜೀವಿತದ ಉದ್ದೇಶವಲ್ಲ ಎಂದು ಎಲ್ಲರಿಗಿಂತ ಚೆನ್ನಾಗಿ ಗೊತ್ತಿದ್ದುದು ಶ್ರೀರಾಮಕೃಷ್ಣರಿಗೆ. ಆದ್ದರಿಂದಲೇ ಅವರು ಶ್ರೀಮಾತೆಯವರನ್ನು ಈ ವಿಶ್ವ ಬ್ರಹ್ಮಾಂಡದ ತಾಯಿಯ ರೂಪದಲ್ಲಿ ಪ್ರತಿಷ್ಠಾಪಿಸಿ ಅವರಿಗೆ ಒಂದು ದೊಡ್ಡ ಜವಾಬ್ದಾರಿಯನ್ನೇ ಹೊರಿಸಿದರು. ಸೇವಾಪರಾಯಣತೆ, ತನ್ನ ಸ್ವ-ಇಚ್ಛೆಯಿಂದಲೇ, ಸ್ವ-ಪ್ರೇರಣೆಯಿಂದಲೇ ಜವಾಬ್ದಾರಿ ತೆಗೆದುಕೊಳ್ಳುವುದು ಅವರಿಗೆ ಉಸಿರಾಟದಷ್ಟು ಸಹಜಕ್ರಿಯೆಯಾಗಿತ್ತು. ಶ್ರೀಮಾತೆಯವರ ಸ್ವಭಾವದಲ್ಲಿ ರಕ್ತಗತವಾಗಿದ್ದ ಈ ಗುಣಗಳನ್ನು ಗುರುತಿಸಿದ ಶ್ರೀರಾಮಕೃಷ್ಣರಿಗೆ ಶ್ರೀಮಾತೆಯವರು ಮುಂಬರುವ ಜಗತ್ತಿನ ಆಧ್ಯಾತ್ಮಿಕ ಆಂದೋಲನದ ಆಧಾರಶಕ್ತಿಯಾಗಿರುವುದರಲ್ಲಿ ಯಾವುದೇ ಸಂದೇಹವೂ ಇರಲಿಲ್ಲ.

## ವೇದಾಂತದ ಸಾಕಾರಮೂರ್ತಿ

ಶ್ರೀಮಾತೆಯವರ ಪ್ರಜ್ಞೆ ಎಷ್ಟು ಆಳವಾಗಿತ್ತು, ಎಷ್ಟು ಸಹಾನುಭೂತಿಯಿಂದ ಕೂಡಿತ್ತು, ಎಷ್ಟು ಆಧುನಿಕವಾಗಿತ್ತು ಎಂಬುದನ್ನು ತಿಳಿಯಬೇಕಾದರೆ, ಸ್ವಾಮಿ ವಿವೇಕಾನಂದರು ತಮ್ಮ

ವೇದಾಂತವ ಪ್ರಚಾರದಿಂದ ಪ್ರಪಂಚದಲ್ಲಿ ಎಬ್ಬಿಸಿದ ಹೊಸ ಅಲೆಗಳ ದಿನಗಳ ಕಡೆ ನೋಡಬೇಕು. ಸ್ವಾಮಿ ವಿವೇಕಾನಂದರಿಗೆ ವೇದಾಂತದ ಉದಾತ್ತ ಸಂದೇಶವನ್ನು ವಿಶ್ವವೇದಿಕೆಯಲ್ಲಿ ಮಂಡಿಸುವುದು ಯಾವುದೇ ಸಮಸ್ಯೆಯಾಗಿರಲಿಲ್ಲ. ಆದರೆ ಪಾಶ್ಚಾತ್ಯರಲ್ಲಿನ ಬೆರಳೆಣಿಕೆಯಷ್ಟಾದರೂ ಜನ ವೇದಾಂತದ ಬೋಧನೆಗಳನ್ನು ಹೃದಯಕ್ಕೆ ತೆಗೆದುಕೊಂಡು, ಅಂತಹ ಘನವಾದ ತತ್ತ್ವಗಳನ್ನಿತ್ತ ಈ ಪುಣ್ಯಭೂಮಿಯನ್ನು ನೋಡಲು ಬರುತ್ತೇವೆಂದಾಗ ಅವರು ಸ್ವಲ್ಪ ವಿಚಲಿತರಾಗಿದ್ದುದು ನಿಜ. ಕಾರಣ, ಭಾರತೀಯ ಸಮಾಜದ ನಿಜವಾದ ಬಣ್ಣವನ್ನು ಕಂಡವರು ಅವರು. ಜಗತ್ತಿನ ಎಲ್ಲಿಯೂ ಕಾಣಸಿಗದಂತಹ ವಿರೋಧಾಭಾಸಗಳು, ದ್ವಂದ್ವಗಳು ಭಾರತೀಯ ಸಮಾಜದಲ್ಲಿ ಮನೆ ಮಾಡಿರುವುದು ಅವರನ್ನು ಸಾಕಷ್ಟು ಚಿಂತೆಗೆ ಹಚ್ಚಿತ್ತು. ಅದ್ವೈತ ಹುಟ್ಟಿದ ನಾಡಿನಲ್ಲೇ ಮ್ಲೇಚ್ಛ ಎಂಬ ಪದವೂ ಹುಟ್ಟಿಕೊಂಡಿದೆ ಎಂದರೆ ನಂಬುವುದೆಂತು! ಅಷ್ಟೇ ಅಲ್ಲದೆ, ಪಾಶ್ಚಾತ್ಯರು, ಅದರಲ್ಲೂ ಅಲ್ಲಿನ ಸ್ತ್ರೀಸಮುದಾಯ ಯಾವುದೇ ಸಮಾಜದ ಬೆಲೆ ಕಟ್ಟುವುದು, ಆ ಸಮಾಜದಲ್ಲಿನ ಸ್ತ್ರೀಯರ ಸ್ಥಾನಮಾನಗಳಿಂದ, ಮತ್ತು ಅಲ್ಲಿನ ಸ್ತ್ರೀಯರು ಹೊಂದಿರುವ ಪ್ರಗತಿಪರ ಆಚಾರವಿಚಾರಗಳಿಂದ ಎಂದು ಸ್ವಾಮೀಜಿಯವರಿಗೆ ಆ ಹೊತ್ತಿಗಾಗಲೆ ಮನವರಿಕೆಯಾಗಿತ್ತು. ಜಾತಿ, ಕಂದಾಚಾರ, ಮೂಢನಂಬಿಕೆಗಳದೇ ಮೇಲುಗೈಯಾಗಿರುವ ಭಾರತೀಯ ಸಮಾಜ ಮ್ಲೇಚ್ಛರೆಂದು ಪಟ್ಟಿಕಟ್ಟಿರುವ ಈ ಪಾಶ್ಚಾತ್ಯರಿಗೆ ಹೇಗೆ ಪ್ರತಿಕ್ರಿಯಿಸುತ್ತದೊ ಎಂಬ ಆತಂಕ ಅವರಿಗಿತ್ತು. ಆದರೆ ಈ ಆತಂಕ ನಿವಾರಣೆಯಾದದ್ದು ಶ್ರೀಮಾತೆಯವರಿಂದ ಎಂಬುದು ಗಮನಾರ್ಹ.

ಆಧುನಿಕ ಶಿಕ್ಷಣದ, ವಿಚಾರಧಾರೆಯ ಯಾವ ಸೌಲಭ್ಯವೂ ಇರದ ಕುಗ್ರಾಮವೊಂದರಲ್ಲಿ ಹುಟ್ಟಿದ್ದರೂ ಅದರ ಸಂಕುಚಿತ ಸಂಕೋಲೆಗಳ ಪ್ರಭಾವಕ್ಕೆ ಎಂದೂ ಸಿಲುಕದ ಶ್ರೀಮಾತೆಯವರು ಅತ್ಯಂತ ಸಹಜತೆಯಿಂದ ಈ 'ಮ್ಲೇಚ್ಛ' ರನ್ನು ತನ್ನವರೇನೊ ಎಂಬ ಆತ್ಮೀಯತೆಯಿಂದ ಕಂಡರು; ಮನೆಯ ಇತರೆ ಸಂಪ್ರದಾಯಸ್ಥರ ಬಿರುನುಡಿಗಳನ್ನೂ ಲೆಕ್ಕಿಸದೆ, ಅವರೊಡನೆ ಉಂಡು, ಅವರಿಗೆ ತಮ್ಮ ಮನೆಯಲ್ಲೇ ಆಶ್ರಯ ನೀಡಿ, ಅವರ ಮೇಲೆ ತಮ್ಮ ಪ್ರೀತಿಯನ್ನು ವರ್ಷಿಸಿದರು. ಇದನ್ನು ಕಂಡು ಸ್ವಾಮೀಜಿಯವರ ಮನಸ್ಸು ಹಗುರಾದುದು ಮಾತ್ರವಷ್ಟೇ ಅಲ್ಲ, ತಮ್ಮ ಹೆಬ್ಬಯಕೆಯೊಂದು ನನಸಾದುದು ಕಂಡು ಅತೀವ ಆನಂದವಾಯಿತು. ತಮ್ಮನ್ನು ನಂಬಿ ಬಂದಿದ್ದ ಈ ಪಾಶ್ಚಾತ್ಯ ಭಕ್ತರು ಉದಾತ್ತವಾದ, ಎಲ್ಲರನ್ನೂ ತಬ್ಬಿನಿಲ್ಲುವ ವೇದಾಂತ ತತ್ತ್ವಗಳ ಸಾಕಾರಮೂರ್ತಿಯನ್ನೇ ಕಾಣುವಂತಾಯಿತಲ್ಲ ಎಂದು ಹರ್ಷಿಸಿದರು. ತಮ್ಮ ಪ್ರಗತಿಪರ ಕಾರ್ಯಪ್ರಣಾಲಿಯನ್ನು ಶ್ರೀಮಾತೆಯವರು ಹೃತ್ಪೂರ್ವಕವಾಗಿ ಹರಸಿದ್ದರಿಂದ ಸ್ವಾಮೀಜಿಯವರ ಕೆಲಸ ಎಷ್ಟೋ ಹಗುರಾಯಿತು.

'ಅವರೂ' ನನ್ನವರೇ

ನಮಗೆ ಹೊರತಾದವರನ್ನು ಕುರಿತು 'ಅವರು' ಎನ್ನುತ್ತಾ ನಮಗೂ ಪ್ರಪಂಚದ ಇತರರಿಗೂ ಒಂದು ಕಂದಕವನ್ನು ಸೃಷ್ಟಿಸಿಕೊಂಡು ಇತರರನ್ನು ಪರಕೀಯರಂತೆ ನಡೆಸಿಕೊಳ್ಳುವುದು ಸಾಮಾನ್ಯ ಜನರ ನೀತಿ. ಕ್ಷುಲ್ಲಕವಾದ 'ನಾನು' ಎಂಬ ಪರ್ವತವನ್ನೇ ಸೃಷ್ಟಿಸಿಕೊಂಡ ವ್ಯಕ್ತಿ ತನ್ನ ಸುತ್ತ ಬೇಲಿ ಹಾಕಿಕೊಂಡು ತನ್ನ ಮನೆ, ಮನೆಮಂದಿ ಎನ್ನುತ್ತಾ ತನ್ನನ್ನು ಪ್ರಪಂಚದಿಂದ ಬೇರ್ಪಡಿಸಿಕೊಳ್ಳುವ ಒಂದು ಪ್ರಕ್ರಿಯೆಯಲ್ಲಿ ನಿರಂತರವಾಗಿ ತೊಡಗಿರುತ್ತಾನೆ. ಆದರೆ ಈ ಕ್ಷುಲ್ಲಕತನ ಅವನಲ್ಲಿ ಮನೆ ಮಾಡಿರುವವರೆಗೂ ಅವನು ವಿಶ್ವವನ್ನು ತನ್ನದನ್ನಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲ. ವಿಶ್ವವನ್ನು ತನ್ನದಾಗಿಸಿಕೊಳ್ಳುವವರೆಗೂ ವ್ಯಕ್ತಿತ್ವದ ಊರ್ಜಿತಕ್ಕೆ ಬೇಕಾಗುವ ಸಾರ ಸತ್ವ ಸತ್ಪ್ರೇರಣೆಗಳನ್ನು ವಿಶ್ವದಿಂದ ಹೀರಿಕೊಳ್ಳಲು ಸಾಧ್ಯವಿಲ್ಲ. ಸಂಸ್ಕೃತದಲ್ಲಿ ಒಂದು ಸುಭಾಷಿತವಿದೆ:

ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್ ।
ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್ ॥

'ಈತನು ನನ್ನವನು, ಈತನು ಬೇರೆಯವನು ಎನ್ನುವುದು ಕ್ಷುದ್ರ ಜನರ ದೃಷ್ಟಿಕೋನ. ಆದರೆ ಮಹಾತ್ಮರಿಗೆ ಸಂಪೂರ್ಣ ವಿಶ್ವವೇ ಒಂದು ಕುಟುಂಬ.' ಈ ವಿಶ್ವವೆಲ್ಲ ತನಗೆ ಸೇರಿದ್ದು ತಾನು ವಿಶ್ವಕ್ಕೆ ಸೇರಿದವಳು ಎಂಬ ಪ್ರಜ್ಞೆ ಶ್ರೀಮಾತೆಯವರಲ್ಲಿ ಎಷ್ಟು ಗಾಢವಾಗಿತ್ತು ಎಂಬುದನ್ನು ತಿಳಿಸುವ ಒಂದು ಘಟನೆ ಇಲ್ಲಿ ಉಲ್ಲೇಖಾರ್ಹ.

**ಎಲ್ಲರೂ ಶ್ರೀಮಾತೆಯವರ ಮಕ್ಕಳು. ಆ ಮಾತೃ ಹೃದಯದಲ್ಲಿ ಎಲ್ಲರಿಗೂ ಸ್ಥಾನವಿತ್ತು, ಸ್ತ್ರೀಗರ್ಭದಿಂದ ಹುಟ್ಟಿದ ಪ್ರತಿಯೊಂದು ಮಗುವನ್ನೂ ಪ್ರೀತಿಯ ಮಡಿಲಲ್ಲಿ ಎತ್ತಿಕೊಳ್ಳುವ ತಾಯೊಡಲು ಅವರದು. ಮಾನವಜನಾಂಗವೇ ಅವರ ಕುಟುಂಬ.**

— ***ಸೋದರಿ ದೇವಮಾತಾ***

ಶ್ರೀಮಾತೆಯವರನ್ನೇ ಆಶ್ರಯಿಸಿಕೊಂಡಿದ್ದ ಅವರ ತವರು ಮನೆಕಡೆಯ ಹೆಣ್ಣುಮಕ್ಕಳಿಗೆಲ್ಲ ದುರ್ಗಾಪೂಜೆಗೆಂದು ಹೊಸ ಬಟ್ಟೆಗಳನ್ನು ಖರೀದಿಸಲು ಶ್ರೀಮಾತೆಯವರು ಒಬ್ಬಾತನಿಗೆ ಹೇಳುತ್ತಾರೆ. ಆತ ಆಗ ತಾನೆ ಜಾಗೃತಗೊಂಡ ರಾಷ್ಟ್ರೀಯತೆಯ ಪ್ರಭಾವಕ್ಕೆ ಸಿಲುಕಿ ದೇಶೀಯ ಒರಟು ಬಟ್ಟೆಗಳನ್ನು ಕೊಂಡು ತರುತ್ತಾನೆ. ಆಗ ಆ ಹೆಣ್ಣುಮಕ್ಕಳು ಅಸಮಾಧಾನಗೊಂಡು ಬಜಾರಿನಲ್ಲಿ ಸಿಗುವ ಒಳ್ಳೆಯ ನುಣುಪಾದ ಬಟ್ಟೆಗಳನ್ನೇ ಇಷ್ಟಪಡುತ್ತಾರೆ. ಆತ, "ಆ ಬಟ್ಟೆಗಳೆಲ್ಲ ಪರಕೀಯರಿಂದ, ವಿದೇಶದವರಿಂದ ತಯಾರಿಸಲ್ಪಟ್ಟಿದ್ದು; 'ಅವರ' ವಸ್ತುಗಳನ್ನು ನಾವು ಬಹಿಷ್ಕರಿಸಬೇಕು" ಎನ್ನುತ್ತಾನೆ. ಆ ಮಾತನ್ನು ಕೇಳಿಸಿಕೊಂಡ ಶ್ರೀಮಾತೆಯವರು, "ಆ 'ಅವರೂ' ಕೂಡ ನನ್ನವರೇ. ಆ ಹೆಣ್ಣುಮಕ್ಕಳಿಗೆ ಯಾವುದು ಇಷ್ಟವೋ ಅದನ್ನೇ ಕೊಂಡು ಬಾ" ಎನ್ನುತ್ತಾರೆ. ಆದರೆ ಮುಂದೊಮ್ಮೆ ಅಂತಹ ಬಟ್ಟೆಗಳನ್ನು ಕೊಳ್ಳುವ ಪ್ರಸಂಗ ಬಂದಾಗ ಆತನ ಬದಲು ಬೇರೊಬ್ಬರನ್ನು

ಕಳುಹಿಸುತ್ತಾರೆ. ಅತ್ಯಂತ ಚಿಕ್ಕ ಚಿಕ್ಕ ವಿಷಯಗಳಲ್ಲಿಯೂ ಅಷ್ಟು ಸೂಕ್ಷ್ಮಸಂವೇದಿಯಾಗಿದ್ದ ಮನಸ್ಸು ಶ್ರೀಮಾತೆಯವರದಾಗಿತ್ತು.

## ನಿತ್ಯಬದುಕಿನ ದೈವೀಕರಣ

ಅಧ್ಯಾತ್ಮದ ಉತ್ತುಂಗದಲ್ಲಿದ್ದ ಶ್ರೀಮಾತೆಯವರಂತಹ ವ್ಯಕ್ತಿ ಪ್ರಾಪಂಚಿಕರೊಡನೆ, ವಿಷಯಾಸಕ್ತರೊಡನೆ, ಸಾಂಸಾರಿಕ ಕ್ಲೇಶಗಳಿಂದ ಜರ್ಜರಿತರಾದವರೊಡನೆ ಬದುಕುವುದನ್ನು ಸಂತೋಷದಿಂದ ಆಯ್ಕೆ ಮಾಡಿಕೊಂಡಾಗ ಆ ವ್ಯಕ್ತಿತ್ವ ತನ್ನ ಸುತ್ತಮುತ್ತಲಿನವರ ಮೇಲೆ ಎಂತಹ ವಿಶಿಷ್ಟವಾದ ಛಾಪನ್ನು ಮೂಡಿಸಲು ಸಾಧ್ಯ ಎಂಬುದನ್ನು ಅವರ ಬದುಕಿನಲ್ಲಿ ಕಾಣಬಹುದಿತ್ತು. ಪ್ರೇಮಾಂಜನವೆಂಬ ಕಾಡಿಗೆಯನ್ನು ಹಚ್ಚಿಕೊಂಡು, ಕಾರುಣ್ಯದ ದೃಷ್ಟಿಯನ್ನು ಹರಿಸುತ್ತಿದ್ದ ಶ್ರೀಮಾತೆಯವರ ಕಣ್ಣುಗಳಿಗೆ ಈ ಪ್ರಪಂಚ, ಈ ಪ್ರಪಂಚದ ಜನರು, ನಮ್ಮ ದೃಷ್ಟಿಕೋನಕ್ಕಿಂತ ಭಿನ್ನವಾದ ಬೇರೆಯದೆ ಆದ ರೀತಿಯಲ್ಲಿ ಕಾಣಿಸುತ್ತಿದ್ದರು ಎಂಬುದರಲ್ಲಿ ಸಂದೇಹವೇ ಇಲ್ಲ. ಅವರಿವರ ಮಾತಿರಲಿ, ಶ್ರೀಮಾತೆಯವರ ಸ್ವಭಾವದ ಪರಿಚಯವಿದ್ದ ಆಕೆಯ ಅಧ್ಯಾತ್ಮಸಂಗಾತಿಯಾಗಿದ್ದ ಗೋಲಾಪ್-ಮಾರವರೇ ಒಮ್ಮೊಮ್ಮೆ ಹತಾಶರಾಗುತ್ತಿದ್ದರು. ಒಮ್ಮೆ ಗೋಲಾಪ್‌ಮಾ ಮನೆಕೆಲಸದವಳನ್ನು ಯಾವುದೋ ಕಾರಣಕ್ಕಾಗಿ ತರಾಟೆಗೆ ತೆಗೆದುಕೊಳ್ಳುತ್ತಿದ್ದಾಗ ಶ್ರೀಮಾತೆಯವರು ಬಂದು "ಏನು ಸಮಾಚಾರ, ಏನಾಯ್ತು?" ಎನ್ನುತ್ತಾರೆ. ಆಗ ಗೋಲಾಪ್‌ಮಾ "ಸರಿ, ನಿಮ್ಮ ಮುಂದೆ ಹೇಳಿಕೊಂಡು ಏನು ಪ್ರಯೋಜನ? ನೀವು ಯಾರ ದೋಷದ ಕಡೆಯೂ ನೋಡಲು ಅಸಮರ್ಥರು" ಎನ್ನುತ್ತಾಳೆ. ಈ ಮಾತುಗಳಿಂದ ಸ್ವಲ್ಪವೂ ವಿಚಲಿತರಾಗದ ಶ್ರೀಮಾತೆಯವರು, "ನೋಡು, ಗೋಲಾಪ್, ಈ ಪ್ರಪಂಚದಲ್ಲಿ ಇತರರ ದೋಷ ನೋಡುವವರಿಗೇನೂ ಬರಗಾಲವಿಲ್ಲ. ನಾನೊಬ್ಬಳು ಸ್ವಲ್ಪ ಭಿನ್ನವಾಗಿದ್ದರೆ ಈ ಪ್ರಪಂಚವೇನೂ ಮುಳುಗಿಹೋಗುವುದಿಲ್ಲ ಅಲ್ಲವೆ?" ಎನ್ನುತ್ತಾರೆ.

ನಾವು ಬದುಕಬೇಕಾದ ಈ ಪ್ರಪಂಚದಲ್ಲಿ ದೋಷಗಳನ್ನೇ ನೋಡುತ್ತಿದ್ದರೆ ನೆಮ್ಮದಿಯಿಂದ ಬದುಕನ್ನು ಸಾಗಿಸುವುದಾದರೂ ಎಂತು? ಈ ಪ್ರಪಂಚದಲ್ಲಿ ದೋಷಗಳನ್ನೇ ನೋಡುತ್ತಿರುವ ಯಾರಿಗೇ ಆಗಲಿ ಈ ಬದುಕು ಅಸಹನೀಯ ಎನಿಸುವುದರಲ್ಲಿ ಆಶ್ಚರ್ಯವೇನು? ಈ ಪ್ರಪಂಚದಲ್ಲಿನ ಒಟ್ಟು ದೋಷ ಸಮೂಹಕ್ಕೆ ನಮ್ಮ ಪಾಲಿನದೇನೂ ಕಡಮೆಯದಲ್ಲವಲ್ಲ? ಈ ಒಟ್ಟು ಮೊತ್ತದಲ್ಲಿ ನಮ್ಮ ಪಾಲಿನದನ್ನು ಕಳೆಯುವುದು ನೆಮ್ಮದಿಯ ಬದುಕಿಗೆ ಮೊದಲಹೆಜ್ಜೆಯಾಗಬಾರದೇಕೆ? ಈ ಜೀವನದರ್ಶನ ಅವರ ಬದುಕಿನಲ್ಲಿ ಅತ್ಯಂತ ಪಾರದರ್ಶಕವಾಗಿ ಎದ್ದು ಕಾಣುತ್ತಿತ್ತು.

## ಓಂಗದ ಹಸಿವು

ಶ್ರೀಮಾತೆಯವರು ಬಾಲ್ಯದಿಂದಲೇ ಮನದಾಳದ ಬೇಗುದಿಗಳ, ಮಾನಸಿಕ ಸಂಕ್ಷೋಭೆಗಳ ಸ್ವರೂಪವನ್ನು ತೀರ ಹತ್ತಿರದಿಂದ ತಿಳಿಯುವಂತಾಗಿತ್ತು. ಬಾಲ್ಯಸಂಗಾತಿಗಳಲ್ಲಿ ಯಾರ ನಡುವೆಯಾದರೂ ಸಣ್ಣಪುಟ್ಟ ಜಗಳಗಳಿಂದ ವೈಮನಸ್ಯಗಳುಂಟಾಗುವುದನ್ನು ನೋಡಿದಾಗ ಇತರರೊಡನೆ ನೆಮ್ಮದಿಯಿಂದ ಬದುಕಲು, ಶಾಂತಿಯಿಂದ ಬಾಳನ್ನು ಸಾಗಿಸಲು ವ್ಯಕ್ತಿ ಏಕೆ ಅಸಮರ್ಥನಾಗಿದ್ದಾನೆ ಎಂಬ ಪ್ರಶ್ನೆ ಅವರಿಗೆ ಎದುರಾಗುತ್ತಿತ್ತು. ವಯಸ್ಸಿಗೆ ಮೀರಿದ ಗಾಂಭೀರ್ಯ, ಪ್ರೌಢಿಮೆ ಅವರ ಸ್ವಭಾವದಲ್ಲಿ ಬೇರುಬಿಟ್ಟಿದ್ದವು.

ಜಗತ್ತಿನಲ್ಲಿ ರೊಟ್ಟಿಗಾಗಿ ಹಸಿದವರಿಗಿಂತ ಪ್ರೀತಿಗಾಗಿ ಹಸಿದಿರುವವರೇ ಜಾಸ್ತಿ ಎಂಬ ಕಟುವಾಸ್ತವವಿದೆ. ಜನರಲ್ಲಿನ ಅಭಾವ, ಕೊರತೆ, ದೌರ್ಬಲ್ಯ ಏನು ಬೇಕಾದರೂ ಅನ್ನಿ. ಶ್ರೀಮಾತೆಯವರಿಗೆ ಪ್ರಪಂಚದ ಈ ಜನರ ಕೊರತೆ ಆಳದ್ದೆನಿಸುತ್ತಿತ್ತು. ಪ್ರೀತಿ, ಸಹಾನುಭೂತಿಗಳ ಕೊರತೆಯಿಂದ ಜನರು ಸೊರಗಿರುವುದನ್ನು ಆಕೆ ತನ್ನ ಬಾಲ್ಯದಿಂದಲೇ ಸಂವೇದಿಸಿದ್ದರು. ತಲೆಯಿಂದ ಓಡಿದು ಕಾಲಿನವರೆಗೆ ಪ್ರೀತಿಗಾಗಿ ಹಸಿದ ಜನರಿಂದ ತಾನು ಆವೃತಳಾಗಿದ್ದೇನೆ ಎಂಬುದನ್ನು ಬಾಲ್ಯದಿಂದಲೇ ಶ್ರೀಮಾತೆಯವರು ಮನಗಂಡಿದ್ದರು. ಮುಂದೆ ವಿಭಿನ್ನ ರೀತಿಯ ಜನರೊಡನೆ ವ್ಯವಹರಿಸಬೇಕಾಗಿ ಬಂದಾಗ ಪ್ರೀತಿಯಿಂದ ವಂಚಿತರಾದ ಜನರಲ್ಲಿ ಅಗಾಧವಾದ ಅಸಂತೃಪ್ತಿ ಅಗ್ನಿಪರ್ವತದಂತೆ ಇದ್ದುದನ್ನು ಅವರು ಕಂಡಿದ್ದರು. ಆತಂಕ ಆಕ್ರೋಶಗಳನ್ನು ತುಂಬಿಕೊಂಡಿದ್ದ ಜನ ಈ ವಿಶಾಲವಾದ ಪ್ರಪಂಚದಲ್ಲಿ ಅನಾಥಪ್ರಜ್ಞೆಯಿಂದ, ತಬ್ಬಲಿಗಳಂತೆ, ದಿಕ್ಕಿಲ್ಲದವರಂತಿದ್ದರು. ಅವರ ಕಣ್ಣುಗಳಲ್ಲಿ ದುಃಖವೇ ಮಡುಗಟ್ಟಿದಂತಿತ್ತು. ಪ್ರೀತಿಯ ಹಸಿವಿನಿಂದ ಕಂಗಾಲಾಗಿ ಅಲೆದಾಡುತ್ತಿರುವ ಈ ಚೇತನಗಳಿಗೆ ಬೇಕಾಗಿರುವುದು ಯಾರಾದರೂ ಅವರನ್ನು ತನ್ನವರೆಂದು ಬಗೆದು ವ್ಯವಹರಿಸುವವರಷ್ಟೇ.

ಪ್ರೀತಿಗಾಗಿನ ಹಸಿವಿಗೆ ಬಡವ ಬಲ್ಲಿದ ಎಂಬ ಭೇದವಿಲ್ಲ. ಆಗಿನ ಕಾಲದ ಅತ್ಯಂತ ವಿದ್ಯಾವಂತ ಮಹಿಳೆಯರೆನಿಸಿದವರೂ ಸಹ ತಮ್ಮ ಹೃದಯಶೂನ್ಯತೆಯನ್ನು ತುಂಬಿಕೊಳ್ಳಲು ಶ್ರೀಮಾತೆಯವರ ಬಳಿ ಬರುತ್ತಿದ್ದರು. ಶ್ರೀಮಾತೆಯವರ ಬಳಿ ಕುಳಿತಾಗ ಚಿಕ್ಕ ಮಗುವಿನಂತಾಗಿಬಿಡುತ್ತಿದ್ದರು. ಅವರ ಸಾನ್ನಿಧ್ಯವೇ ಆಳವಾದ ಒಂದು ಹೃದಯ ಸ್ಪಂದನೆಯನ್ನು ಉಂಟುಮಾಡುತ್ತಿತ್ತು. ಶ್ರೀರಾಮಕೃಷ್ಣರು ಬಹಳ ಮುಂಚೆಯೇ ತಿಳಿಸಿದ್ದಂತೆ ಅಮ್ಮಾ ಎಂದು ಕೂಗಿಕೊಂಡು ಬರುವ ಜನರಿಂದ ಶ್ರೀಮಾತೆಯವರು ಸುಸ್ತುಹೊಡೆಯುತ್ತಾರೆ ಎಂಬ ಮಾತು ನಿಜವಾಯಿತು ಸರಿಯೇ. ಆದರೆ ಅಕ್ಷರಶಃ ಅಲ್ಲ. ಕಾರಣ ಶ್ರೀಮಾತೆಯವರು ತಮ್ಮಲ್ಲಿ ಬರುತ್ತಿದ್ದ ಅಸಂಖ್ಯಾತ ಜನರು ತಮ್ಮ ಹೃದಯವೇದನೆಯನ್ನು ತೋಡಿಕೊಂಡು, ಶ್ರೀಮಾತೆಯವರ ಪ್ರೀತಿಯನ್ನು ಹಂಚಿಕೊಂಡು ಮನಸ್ಸನ್ನು ಹಗುರಾಗಿಸಿಕೊಳ್ಳುತ್ತಿದ್ದರಾದರೂ ಅವರಿಂದ ಶ್ರೀಮಾತೆಯವರು ಒಂದಿಷ್ಟೂ ಎಂದೂ ಬೇಸರಗೊಂಡಂತೆ ಕಾಣುತ್ತಿರಲಿಲ್ಲ.

ಮನುಷ್ಯ ಸ್ವಭಾವದ ಬಗ್ಗೆ, ಮನಸ್ಸಿನ ಒಳಪದರುಗಳ ಸೂಕ್ಷ್ಮತೆಗಳ ಬಗ್ಗೆ, ಸಂಸಾರದ ಸೂಕ್ಷ್ಮತೆಗಳ ಬಗ್ಗೆ, ವ್ಯವ

ಹಾರದಲ್ಲಿ ಎದುರಿಸಬೇಕಾದ ತೊಡಕುಗಳ ಬಗ್ಗೆ ಅವರಿಗಿದ್ದ ಅಸಾಧಾರಣ ತಿಳುವಳಿಕೆ ಸೂಕ್ಷ್ಮ ಸಂವೇದನೆ ಎಂತಹವರನ್ನೂ ನಿಷ್ಪೈರಗಾಗಿಸುತ್ತಿತ್ತು. ಅಶಾಂತಿಯ ಭಾಂಡದಂತಿರುವ ಮನುಷ್ಯನ ಒಳಗನ್ನು ಎಲ್ಲಿ ಸ್ಪರ್ಶಿಸಿದರೆ ಅದು ಮಾರ್ದವವಾಗುತ್ತವೆ ಎಂಬುದನ್ನು ಅರಿತಿದ್ದ ಶ್ರೀಮಾತೆಯವರು ಪ್ರತಿಯೊಂದು ವ್ಯಕ್ತಿಗೂ ತನ್ನಲ್ಲಿಯೂ ಶ್ರೇಷ್ಠವಾದುದೊಂದಿದೆ ಎಂಬ ವಿಶ್ವಾಸವನ್ನು ಮೂಡಿಸುತ್ತಿದ್ದರು. ಆ ಅತ್ಯುತ್ತಮವಾದುದನ್ನು ಕೆರಳಿಸುವುದರ ಕಲೆ ಅವರಿಗೆ ಸಿದ್ಧಿಸಿತ್ತು. ವ್ಯಕ್ತಿ ತನ್ನಲ್ಲಿರುವ ಅತ್ಯುತ್ತಮವಾದುದರ ನೆಲೆಯಿಂದ ಬದುಕಿಗೆ ಸ್ಪಂದಿಸುವಂತೆ ಮಾಡಿ ಅವನಲ್ಲಿ ಜೀವನೋತ್ಸಾಹವನ್ನು ತುಂಬುತ್ತಿದ್ದರು. ಕಳ್ಳನಾಗಲಿ, ಕಟುಕನಾಗಲಿ, ಕಡುಪಾಪಿಯಾಗಲಿ, ಎಂತಹ ಕಲ್ಲು ಹೃದಯದವನನ್ನೂ ಮೆದುವಾಗಿಸಿ ಕರಗಿಹೋಗುವಂತೆ ಮಾಡುವ ಮಾಂತ್ರಿಕ ಶಕ್ತಿ ಅವರ ವ್ಯಕ್ತಿತ್ವದಲ್ಲಿ ಮನೆಮಾಡಿತ್ತು. ಇಂತಹ ಪ್ರಸಂಗಗಳಲ್ಲಿ ವಿಜೃಂಭಿಸುತ್ತಿದ್ದುದು ಶ್ರೀಮಾತೆಯವರ ಒಲವಿನ ಶಕ್ತಿಯೇ. ತಾಯಿಗೆ ಮಗುವಿನಲ್ಲಿರುವಂತಹ ನಿಃಸ್ವಾರ್ಥ ಪ್ರೀತಿಗೆ ಸೋಲದ, ಮಣಿಯದ ಶಕ್ತಿ ಇತಿಹಾಸದಲ್ಲಿ ಇನ್ನೂ ಹುಟ್ಟಿಲ್ಲ, ಹುಟ್ಟುವ ಸಾಧ್ಯತೆಯೂ ಇಲ್ಲ. ಶ್ರೀಮಾತೆಯವರು ಹೇಗೆ ತಮ್ಮ ಬಳಿ ಬಂದವರನ್ನು ತಮ್ಮ ಸ್ನೇಹದ ಶೃಂಖಲೆಯಿಂದ ಬಂಧಿಸುತ್ತಿದ್ದರು ಎಂಬುದನ್ನು ಕುರಿತು ಸ್ವಾಮಿ ಅಭೇದಾನಂದರು ಹೇಳುವ ಮಾತು ಅಕ್ಷರಶಃ ಸತ್ಯ : **ಸ್ನೇಹೇನ ಬಧ್ನಾಸಿ ಮನೋಽಸ್ಮದೀಯಮ್, ದೋಷಾನಶೇಷಾನ್ ಸಗುಣೀ ಕರೋಷಿ—** "ನಮ್ಮ ಮನಸ್ಸನ್ನು ಸ್ನೇಹದಿಂದ ಬಂಧಿಸುತ್ತೀಯೆ, ನಮ್ಮ ಅಪಾರ ದೋಷಗಳನ್ನೂ ಗುಣಗಳನ್ನಾಗಿ ಮಾಡುತ್ತೀಯೆ."

## ದೇವರ ತಾಯ್ತನ

ಶ್ರೀರಾಮಕೃಷ್ಣರೇ ಆಗಲಿ, ಮುಂದೆ ಶ್ರೀಮಾತೆಯವರೇ ಆಗಲಿ, ತಮ್ಮ ಬಳಿಗೆ ಬರುತ್ತಿದ್ದ ವ್ಯಕ್ತಿಗಳ ಅಂತರಾಳಕ್ಕೇ ಅವರ ಮನದಂಗಳದ ಭಾವನಾ ಪ್ರಪಂಚಕ್ಕೇ ನೇರವಾಗಿ ಲಗ್ಗೆ ಇಡುತ್ತಿದ್ದರು. ವ್ಯಕ್ತಿಗಳ ಆತ್ಮವನ್ನೇ ತಾಕುವಂತಿದ್ದ ತಮ್ಮ ವಿಶಿಷ್ಟವಾದ ವರ್ತನೆಯಿಂದ ಶ್ರೀರಾಮಕೃಷ್ಣರೇ ಆಗಲಿ ಶ್ರೀಮಾತೆಯವರೇ ಆಗಲಿ ಎಂತಹ ಅಪರಿಚಿತರನ್ನೂ ಕ್ಷಣಾರ್ಧದಲ್ಲಿ ತಮ್ಮವರನ್ನಾಗಿ ಮಾಡಿಕೊಂಡು ಅವರನ್ನು ತಮ್ಮ ಅಂತರಂಗದ ವೈಭವಕ್ಕೆ ಎಚ್ಚರಗೊಳಿಸಿ ಅವರ ಬದುಕಿನ ದಿಕ್ಕನ್ನೇ ಬದಲಾಯಿಸಿಬಿಡುತ್ತಿದ್ದರು, ಆ ವ್ಯಕ್ತಿಗಳ ಮುಂದೆ ಒಂದು ಹೊಸ ಪ್ರಪಂಚವೆ ಬಿಚ್ಚಿಕೊಳ್ಳುತ್ತಿತ್ತು.

ಆಧುನಿಕ ಯುಗದಲ್ಲಿ ಅನಾಥಪ್ರಜ್ಞೆಯಿಂದ ನರಳುತ್ತಿರುವ ವ್ಯಕ್ತಿಗಳಿಗೆ ದೇವರ ತಾಯ್ತನದ ಕಾಳಜಿಯನ್ನು ಪ್ರೀತಿಯನ್ನು ತೋರಿಸಲೆಂದು ಶ್ರೀರಾಮಕೃಷ್ಣರು ತಮ್ಮನ್ನು ಬಿಟ್ಟು ಹೋಗಿರುವರು ಎಂಬ ಮಾತಿನ ಬೆಳಕಿನಲ್ಲಿ ಶ್ರೀಮಾತೆಯವರ ನಡೆ ನುಡಿ ಎಲ್ಲವೂ ಹೊಸ ಅರ್ಥವನ್ನು ಪಡೆಯುತ್ತವೆ. ಶ್ರೀಮಾತೆಯವರಿಗೆ ಪ್ರಪಂಚದ ಎಲ್ಲ ಜೀವಿಗಳೊಂದಿಗೆ ಇದ್ದ ಸಂತಾನ ಭಾವ, ಆ ಭಾವದಲ್ಲಿ ಅವರು ತೋರುತ್ತಿದ್ದ ಕಕ್ಕುಲತೆ, ವಾತ್ಸಲ್ಯ, ಮಮತೆ ಇವೆಲ್ಲದರ ಮೂಲದಲ್ಲಿ ನಿರಂತರವಾಗಿ ಕ್ರಿಯಾಶೀಲವಾಗಿದ್ದುದು ದೈವಿಕತೆಯೇ. ಶ್ರೀಮಾತೆಯವರಲ್ಲಿ ದೈವಪ್ರೇಮವೇ ಮಾನವೀರೂಪದಲ್ಲಿ ಮೈತಳೆದು ಸದ್ದು ಗದ್ದಲವಿಲ್ಲದೆ ಮನುಷ್ಯನನ್ನು ದೇವರ ಬಳಿಗೆ ಸೆಳೆಯುವ ಚಿರಂತನ ಶಕ್ತಿಯಾಗಿತ್ತು. ತಮ್ಮ ತಾಯ್ತನದ ಶೃಂಖಲೆಯಿಂದ ಪ್ರೇಮದಿಂದ ತುಂಬಿಸಿಕೊಳ್ಳುವ ಕರುಣೆಯಿಂದ ಮಾನವಸಮೂಹವನ್ನು ಒಟ್ಟಾಗಿಸುವ ಒಂದು ದಿವ್ಯಶಕ್ತಿಯ ಕೇಂದ್ರವಾಗಿದ್ದರು ಶ್ರೀಮಾತೆಯವರು.

## ನಿತ್ಯೋತ್ಸವ ತಾಯೆ ನಿತ್ಯೋತ್ಸವ

ಶ್ರೀಮಾತೆಯವರಲ್ಲಿ ವ್ಯಕ್ತವಾದ ತಾಯ್ತನ ಅಥವಾ ದೇವರ "ಮಾತೃತತ್ತ್ವವು" ಮನುಷ್ಯ ಸಂದರ್ಭದಲ್ಲಿ ವ್ಯಕ್ತಗೊಂಡ ಒಂದು ಮುಖವಾಗಿತ್ತು. ಅದೇ ಮಾತೃತತ್ತ್ವವು ಪಾಪಿ ಮಹಾತ್ಮ ಇವರಿಬ್ಬರ ನಡುವೆ ಯಾವುದೇ ಭೇದವನ್ನೆಣಿಸದ — ಸೂರ್ಯನ ಪ್ರಕಾಶ ಇಬ್ಬರ ಮೇಲೂ ಸಮಾನವಾಗಿ ಬೀಳುವಂತೆ—ಪ್ರಕೃತಿಯಲ್ಲಿ ನಿತ್ಯರಾರಾಜಿಸುತ್ತಿರುತ್ತದೆ. ಶ್ರೀಮಾತೆಯವರಲ್ಲಿ ಅದು ಪೂರ್ಣಪ್ರಮಾಣದಲ್ಲಿ ವ್ಯಕ್ತವಾದುದರಿಂದಲೇ ಅವರನ್ನು ಪರಮಾ ಪ್ರಕೃತಿ ಎಂದು ಸ್ತುತಿಸಲಾಗಿದೆ. ಹೊರಗಿನ ಪ್ರಕೃತಿಗಿಂತ ಮನುಷ್ಯನೊಳಗಿರುವ ಪ್ರಾಕೃತಿಕ ಶಕ್ತಿಗಳಿಗೆ ಸಂಸ್ಕಾರ ನೀಡುವ ತಾಯಿಯಾಗಿದ್ದರು ಶ್ರೀಮಾತೆಯವರು. ಬದುಕನ್ನು ಜೀವಂತವಾಗಿಡುವ, ಪೋಷಿಸುವ ಸಮೃದ್ಧವಾದ ಈ ಪ್ರಕೃತಿಯನ್ನು ಸುಜಲಾಂ ಸುಫಲಾಂ ಮಲಯಜ ಶೀತಲಾಂ... ಎಂದು ಹಾಡಲಾಗಿದೆ. ನಮ್ಮ ಬದುಕಿನ ಸಮೃದ್ಧಿಗೆ ಕಾರಣವಾದ ಈ ಪ್ರಾಕೃತಿಕ ಸಂಪತ್ತನ್ನು ಹೊಂದಿರುವ ಬುವಿಯನ್ನು ತಾಯಿ ಎಂದು ತಿಳಿದು ವಂದೇ ಮಾತರಂ ಎಂದು ಪ್ರಾತಃಕಾಲದಲ್ಲಿ ಸ್ಮರಿಸುವುದು ವಿಶ್ವಕುಟುಂಬದ ಅಧಿಷ್ಠಾನ ದೇವತೆಗೆ ನಮ್ಮ ನಮನ ಗೌರವಗಳನ್ನು ಸಲ್ಲಿಸಿದಂತೆ.

ಮಂಗಳದಾಯಿನಿಯಾದ, ಬದುಕನ್ನು ಶ್ರೀಮಂತವಾಗಿರಿಸುವ ಈ ಪ್ರಕೃತಿಯ ವೈಭವವನ್ನು ಕುರಿತು "ತಾಯಿಯ ನಿತ್ಯೋತ್ಸವ"ವೆಂದು ಹಾಡಿದ್ದಾರೆ ಕನ್ನಡದ ಹೆಸರಾಂತ ಕವಿ ಕೆ.ಎಸ್.ನಿಸಾರ್ ಅಹಮದ್‌ರವರು. ಆ ಕವಿತೆಯ ಕೊನೆಯ ನುಡಿ ಎಲ್ಲರನ್ನೂ ತಬ್ಬಿನಿಲ್ಲುವ, ಎಲ್ಲರಿಗೂ ಜಾಗ ಮಾಡಿಕೊಡುವ ಔದಾರ್ಯದ ಕುರಿತಾಗಿದೆ :

> **ಹಲವೆನ್ನದ ಹಿರಿಮೆಯೆ, ಕುಲವೆನ್ನದ ಗರಿಮೆಯೆ**
> **ಸಹಿಷ್ಣುತಾಸಶೀಲ ನುಡಿಯ ಲೋಕಾವೃತ ಸೀಮೆಯೆ**
> **ಈ ವತ್ಸರ ನಿರ್ಮತ್ಸರ ಮನದುದಾರ ಮಹಿಮೆಯೆ**
> **ನಿತ್ಯೋತ್ಸವ ತಾಯೆ ನಿತ್ಯೋತ್ಸವ.**

ಈ ಸಾಲುಗಳ ಬೆಳಕಿನಲ್ಲಿ ಶ್ರೀಮಾತೆಯವರ ಬದುಕು, ಚಿಂತನೆಗಳನ್ನು ಅವಲೋಕಿಸಿದಾಗ ವಿಶ್ವಕುಟುಂಬದ ಕೇಂದ್ರ ವ್ಯಕ್ತಿ ಹೇಗಿರಬೇಕು ಎಂಬುದರ ಕಲ್ಪನೆ ನಮಗಾಗದಿರದು.

❖